ಒಂದು ದಿನ ವಲ್ಲಭಭಾಯಿ ಪಟೇಲರು ಒಂದು ಮೊಕದ್ದಮೆಯ ವಿಚಾರಣೆಯಲ್ಲಿ ಹಾಜರಾಗಬೇಕಿತ್ತು. ಅವರು ಸಂಪೂರ್ಣ ಏಕಾಗ್ರತೆಯಿಂದ ನ್ಯಾಯಾಧೀಶರ ಮುಂದೆ ವಾದಿಸುತ್ತಿದ್ದರು. ಬಹಳ ದಕ್ಷತೆಯಿಂದ ವಾದ ಮಂಡಿಸುತ್ತಿರುವ ಸಮಯದಲ್ಲಿ ಅವರಿಗೆ ಒಂದು ಟೆಲಿಗ್ರಾಂ ಬಂದಿತು. ಕೂಡಲೇ ಅದನ್ನು ಬಿಡಿಸಿ ಓದಿದರು. ತಮ್ಮ ಮುಖಭಾವದಲ್ಲಿ ಯಾವುದೇ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸದೆ ಹಾಗೆಯೇ ಅದನ್ನು ಮಡಿಸಿ ತಮ್ಮ ಜೇಬಿನಲ್ಲಿ ಇಟ್ಟುಕೊಂಡು, ತಮ್ಮ ವಾದವನ್ನು ಮುಂದುವರಿಸಿದರು. ತಮ್ಮ ವಾದಮಂಡನೆ ಪೂರ್ಣವಾದ ನಂತರವೇ ಪಟೇಲರು ಟೆಲಿಗ್ರಾಂನ ವಿಷಯವನ್ನು ಬಹಿರಂಗ ಪಡಿಸಿದರು. ಆ ಟೆಲಿಗ್ರಾಂ ಅವರ ಹೆಂಡತಿಯ ನಿಧನದ ವಾರ್ತೆಯನ್ನು ಹೊತ್ತು ತಂದಿತ್ತು! ಕಾರ್ಯತತ್ಪರತೆ, ಭಾವನೆಗಳ ನಿಗ್ರಹ ಎಂದರೆ ಏನು ಎಂಬುದನ್ನು ಪಟೇಲ್ ತೋರಿದರು.

ಹೀಗೆ ಎಂತಹ ಗಂಭೀರ ಪರಿಸ್ಥಿತಿಯಲ್ಲಿಯೂ ಅವರ ಮನಸ್ಸು ಕ್ಷೋಭೆಗೊಳ್ಳುತ್ತಿರಲಿಲ್ಲ. ಕಾರ್ಯತತ್ಪರತೆಯ ವಿಷಯದಲ್ಲಿ ಉಕ್ಕಿನ ಮನುಷ್ಯರಾಗಿದ್ದ ವಲ್ಲಭಭಾಯಿ ಪಟೇಲರಿಗೆ ಮನಸ್ಸೂ ಉಕ್ಕಿನಂತಹುದೇ. ✪

## ಕಾರ್ಯತತ್ಪರತೆ



**ಚಿತ್ರ:**
ಬಿ.ಕೆ. ಸೋಮಶೇಖರ,
ಬೆಂಗಳೂರು